ಶ್ರೀ ಕೆ.ಎಂ. ತಿಮ್ಮರಾಯಪ್ಪ: ಮಾನ್ಯ ಅಧ್ಯಕ್ಷರೆ, ಅಲ್ಲಿ ಜಾಗ ಇರುವವರಿಗೆ ಮನೆ ಬೇಕು. ಯಾರ್ಯಾರಿಗೆ ಮನೆ ಇದೆ, ಅವರಿಗೆ ಬೇಡ. ಇಲ್ಲದಿರುವಂತಹ ಫಲಾನುಭವಿಗಳಿಗೆ ಪುನರ್‌ವಸತಿ ಯೋಜನೆಯಡಿಯಲ್ಲಿ ವಿಶೇಷವಾಗಿ ಪರಿಗಣಿಸಿ ಸರ್ಕಾರ ಮಾಡಬೇಕು.

ಅಧ್ಯಕ್ಷರು: ಅದರ ಬಗ್ಗೆ ಒಂದು ಸ್ಕೀಮ್ ಇದೆ, ಮಾಡಿ.

ಶ್ರೀ ಹೆಚ್.ಕೆ. ಪಾಟೀಲ್: ಅದಕ್ಕೆ ಒಂದು ಸ್ಕೀಮ್ ಇದೆ. ನಾವು ಅವರಿಗೆ pension ಕೊಡುತ್ತೇವೆ, ಎಲ್ಲಾ ಮಾಡುತ್ತೇವೆ.

ಅಧ್ಯಕ್ಷರು: ಬೋಪಯ್ಯನವರೆ ನಿಮ್ಮ ವಿಷಯ ನಾಳೆಗೆ ತೆಗೆದುಕೊಳ್ಳುತ್ತೇವೆ.

5. ವಿಷಯ: ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಿ.ಯು.ಸಿ ವಿದ್ಯಾರ್ಥಿಗಳು ಸಕಾಲದಲ್ಲಿ ಹಾಸ್ಟೆಲ್ ಸೌಲಭ್ಯವನ್ನು ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ್ (ಶಿವಮೊಗ್ಗ ಗ್ರಾಮೀಣ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಿ.ಯು.ಸಿ ವಿದ್ಯಾರ್ಥಿಗಳು ಸಕಾಲದಲ್ಲಿ ಹಾಸ್ಟೆಲ್ ಸೌಲಭ್ಯವನ್ನು ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಚ್.ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರ:

1. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪಿ.ಯು.ಸಿ ಎರಡನೇ ವರ್ಷದ ವಿದ್ಯಾರ್ಥಿಗಳನ್ನೂ ಸೇರಿಸಿ, ಮೆಟ್ರಿಕ್ ನಂತರದ ಎಲ್ಲಾ ವಸತಿ ನಿಲಯಗಳನ್ನು ಈಗಾಗಲೇ ನಡೆಸಲಾಗುತ್ತದೆ.
2. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪಿ.ಯು.ಸಿ ಮೊದಲನೇ ತರಗತಿ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ, ವಿದ್ಯಾರ್ಥಿ ನಿಲಯ ಪ್ರವೇಶಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ

ವಿದ್ಯಾರ್ಥಿನಿಲಯಗಳಿಗೆ ಆನ್–ಲೈನ್ ಮುಖಾಂತರ ಅರ್ಜಿಗಳನ್ನು ಕರೆಯಲಾಗುತ್ತಿಲ್ಲ. ನೇರವಾಗಿ ಅರ್ಜಿಗಳನ್ನು ಕರೆಯಲಾಗುತ್ತಿದೆ. ಸ್ವೀಕರಿಸಿದ ಅರ್ಜಿಗಳನ್ನು ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಅನುಮೋದನೆ ಪಡೆದು ದಾಖಲಾತಿ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಸಮಿತಿಗಳು ಅನುಮೋದನೆ ನೀಡಿದ ತಕ್ಷಣವೇ ಅರ್ಹ ಎಲ್ಲಾ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು.

3. ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೇ. 25% ಪ್ರತಿಶತ ಸೀಟುಗಳನ್ನು ನಿಗದಿ ಪಡಿಸಿದ್ದು, ಅಂತಹ ವಿದ್ಯಾರ್ಥಿಗಳು ಆ ಇಲಾಖೆಗೆ ಆನ್–ಲೈನ್ ಮುಖಾಂತರ ಅರ್ಜಿ ಸಲ್ಲಿಸಬೇಕಾಗಿದೆ. ಆದ್ದರಿಂದ ಆ ಪ್ರಕ್ರಿಯೆಯನ್ನು ತ್ವರಿತಗೊಳಿಸಿ ಬೇಗನೆ ಪ್ರವೇಶ ನೀಡಲಾಗುವುದು.

ಶ್ರೀಮತಿ ಶಾರದಾ ಪೂರ್ಯ ನಾಯ್ಕ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಉತ್ತರ ಕೊಟ್ಟಿದ್ದಾರೆ, ಆದರೆ ಬಿಸಿಎಂ ಹಾಸ್ಟೆಲ್ ಬಗ್ಗೆ ಏನೂ ಪ್ರಸ್ತಾವನೆ ಮಾಡಿಲ್ಲ. ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ನದು ಸಮಸ್ಯೆಯಾಗುವುದಿಲ್ಲ. EBL ಮಾಡಿಕೊಳ್ಳಬಹುದು, ಏಕೆಂದರೆ ಅವರಿಗೆ ಹೇಗಾದರೂ ಹಾಸ್ಟೆಲ್ ಪ್ರಾರಂಭ ಮಾಡಿಸಬಹುದು. ನಮಗೆ ಇಲ್ಲಿ ಸರಿಯಾಗಿ ಉತ್ತರ ಸಿಕ್ಕಿಲ್ಲ. ಮಕ್ಕಳಿಗೆ online ಮಾಡಿರುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಏಕೆಂದರೆ ಇಷ್ಟೊತ್ತಿಗೆ ನಾವು ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಕೊಡಬೇಕಾಗಿತ್ತು. ವಿದ್ಯಾರ್ಥಿಗಳು ಹಾಸ್ಟೆಲ್‌ಗಾಗಿ ಅಲೆಯುತ್ತಿದ್ದಾರೆ. ಅಧಿವೇಶನ ಪ್ರಾರಂಭ ಆಗುವುದಕ್ಕಿಂತ ಮೊದಲೇ ಅವರಿಗೆ ಹಾಸ್ಟೇಲ್ ವ್ಯವಸ್ಥೆ ಮಾಡಿ ಬರೋಣವೆಂದರೆ, ಈಗ compulsory ಆಗಿ online ನಲ್ಲಿಯೇ ಮಾಡಬೇಕೆಂದು ಆಗಿದೆ. ಹಿಂದೆ ಬರೆದು ಕೊಟ್ಟಿರುವ ಅರ್ಜಿಗಳೇನಿವೆ, ಅದನ್ನು ಪುನ: online ನಲ್ಲೇ ಮಾಡಬೇಕೆಂದು ಹೇಳಿದರು. ಇದಕ್ಕೆ ಪರಿಹಾರ ಸಿಗಲಿಲ್ಲ.

ಅಧ್ಯಕ್ಷರು: ಈಗ 21ನೇ ಶತಮಾನದಲ್ಲಿದ್ದಾರೆ. ಅವರು ಈಗಾಗಲೇ 22ನೇ ಶತಮಾನಕ್ಕೆ ಹೋಗಿದ್ದಾರೆ. ಅರ್ಜಿಯನ್ನು ಇನ್ನೂ online ನಲ್ಲಿಯೇ ಕೊಡುವುದು?

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಮಾನ್ಯ ಅಧ್ಯಕ್ಷರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಇದನ್ನೇ ಎರಡು ತಿಂಗಳು ಮೊದಲೇ ಹೇಳಬೇಕಾಗಿತ್ತು, ಆಗ ಮಕ್ಕಳಿಗೆ ಗೊತ್ತಾಗುತ್ತಿತ್ತು ಅಲ್ಲವೇ?

ಅಧ್ಯಕ್ಷರು: ಒಂದು ಅರ್ಜಿ ತೆಗೆದುಕೊಂಡು ಅಲ್ಲಿ ಕೊಡುವುದಕ್ಕೆ ಅವಕಾಶ ಇದ್ದರೆ ಕಮಿಟಿ ಇದೆ, ಅರ್ಜಿ ತೆಗೆದುಕೊಳ್ಳಲಿ.

ಶ್ರೀ ಎನ್.ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, online ಮೂಲಕ ಇವತ್ತು ಎಸ್‌ಸಿ/ಎಸ್‌ಟಿ ಹುಡುಗರಿಗೆ ಕೊಡುವುದಕ್ಕೆ ಮಾಡಿದ್ದಾರೆ.

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಇಲ್ಲ, ಇಲ್ಲಿ ಉತ್ತರ ತಪ್ಪು ಕೊಟ್ಟಿದ್ದಾರೆ. ಎಸ್‌ಸಿ/ಎಸ್‌ಟಿ ಗೆ ಇಲ್ಲವೆಂದು ಹೇಳುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ: ಈಗ online ನಲ್ಲಿ ಅರ್ಜಿಯನ್ನು ಕೊಡಬೇಕಾಗಿದೆ. ಈಗ ತಮ್ಮ ಪ್ರಶ್ನೆ ಇರುವುದು ಲಿಖಿತವಾಗಿ ಅರ್ಜಿ ಕೊಟ್ಟಿರುವುದನ್ನು ಕೂಡ ಪರಿಗಣಿಸಬೇಕೆದು ತಾನೇ ಹೇಳುತ್ತಿರುವುದು.

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಹೌದು, ಅವರನ್ನು ತೆಗೆದುಕೊಳ್ಳಬೇಕು. ಅವರಿಗೆ ಮತ್ತೆ ಹೊಸದಾಗಿ onlineನಲ್ಲಿ ಅರ್ಜಿಯನ್ನು ಹಾಕಿ ಎಂದು ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ಲಿಖಿತ ಅರ್ಜಿಯನ್ನು online ಗೆ convert ಮಾಡುವುದಕ್ಕೆ ಯಾವ ಬಾಧಕವಿಲ್ಲ. ಆ ಅರ್ಜಿಯನ್ನು convert ಮಾಡಿಕೊಡುವಂತಹ ಕೆಲಸವನ್ನು ಮಾಡೋಣ.

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಮಾನ್ಯ ಅಧ್ಯಕ್ಷರೆ, convert ಎಂದರೆ ಯಾರು ಮಾಡಬೇಕು?

ಶ್ರೀ ಕೆ. ಶಿವಮೂರ್ತಿ: ಎಸ್‌ಸಿ/ಎಸ್‌ಟಿ ತಂದೆತಾಯಿಗಳಿಗೆ online ಎಂದರೆ ಏನು ಗೊತ್ತಾಗುತ್ತದೆ? ಅವರಿಗೆ ಸ್ವಲ್ಪ ತಿಳುವಳಿಕೆ ಹೇಳಬೇಕಲ್ಲ.

ಅಧ್ಯಕ್ಷರು: ಅದಕ್ಕೆ ಒಂದು ಕೆಲಸ ಮಾಡಿ. ಸಮಾಜ ಕಲ್ಯಾಣ ಸಚಿವರು ನಿಮ್ಮವರೇ, ಆ ಇಲಾಖೆಯನ್ನು ನಾನು ನಡೆಸಿದ್ದೇನೆ. ಆದರೆ ನಾವು online, inline, ಇದೆಲ್ಲ ಮಾಡಲಿಲ್ಲ. ಮಾಮೂಲಿಯಾಗಿ ಏನಿದೆ ಆ ಒಂದು ಸಣ್ಣ ಕೆಲಸ ಮಾಡುವುದು ಬಿಟ್ಟು ಬೇರೆ ಬೇಡ.

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಮಾನ್ಯ ಅಧ್ಯಕ್ಷರೆ, ಈ ಹಿಂದೆ ಯಾವ ರೀತಿ ಮಾಡುತ್ತಿದ್ದೇವು, ಅದೇ ರೀತಿ ಮಾಡುವುದಕ್ಕೆ ಅಧಿಕಾರಿಗಳಿಗೆ ಹೇಳಿ.

ಶ್ರೀ ಈ. ತುಕಾರಾಮ್: ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಹಾಸ್ಟೆಲ್‌ಗೆ ಅಡ್ಮಿಷನ್ ಆಗಬೇಕಾದರೆ ಮುಂದೆ ಆಗುವಂತಹ ಅನಾಹುತಗಳನ್ನು ಎರಡು ತಿಂಗಳ ಮೊದಲೇ ಸರಿ ಮಾಡಿ ಈ ವ್ಯವಸ್ಥೆಯಲ್ಲಿ ಮಾಡಬೇಕೆಂದು ಹೇಳಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಇದನ್ನು ಮೊದಲು ಆದ್ಯತೆ ಮೇಲೆ ಪರಿಗಣನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಇದರ ಬಗ್ಗೆ ಮೊದಲೇ ಹೇಳಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ.

ಅಧ್ಯಕ್ಷರು: ಆಯಿತು, ಎಲ್ಲಾ ಸರಿ ಮಾಡುತ್ತೇವೆಂದು ಹೇಳಿ.

ಶ್ರೀಮತಿ ಶಾರದ ಪೂರ್ಯ ನಾಯ್ಕ್: ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಗಳಿಗೆ ಮೆಸೇಜ್ ಕಳುಹಿಸಬೇಕು.

ಅಧ್ಯಕ್ಷರು: ಆಯಿತು, ಈಗಲೇ ಮೆಸೇಜ್ ಕಳುಹಿಸಿ.

ಶ್ರೀ ಟಿ.ಬಿ. ಜಯಚಂದ್ರ: ಈಗ ಲಿಖಿತವಾಗಿ ಕೊಟ್ಟಿರುವಂತಹ ಅರ್ಜಿಗಳನ್ನು ಕೂಡ onlineಗೆ convert ಮಾಡಿಕೊಡುವುದಕ್ಕೆ ಯಾವ ತೊಂದರೆ ಇಲ್ಲ. ಅದನ್ನು ನಾವು ಖಂಡಿತವಾಗಿ ಮಾಡುತ್ತೇವೆ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ: ಅದನ್ನು ಮಾಡುವುದಕ್ಕೆ ಆಗುವುದಿಲ್ಲ, ಸುಳ್ಳು, ಅಷ್ಟೊಂದು ಸಿಬ್ಬಂದಿ ವರ್ಗ ಎಲ್ಲಿದೆ? ಅದನ್ನು onlineನಲ್ಲಿ ಯಾರು ಮಾಡುತ್ತಾರೆ?

ಅಧ್ಯಕ್ಷರು: ಇದು ಚರ್ಚೆ ಇಲ್ಲ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ: ನನಗೆ ಚರ್ಚೆ ಬೇಡ. ನನಗೆ ಸಮಸ್ಯೆ ಬಗೆಹರಿಯಬೇಕು. ದಯವಿಟ್ಟು ತಾವು ಅವಕಾಶ ಕೊಡಿ. ಈ ಹಿಂದೆ ಯಾವ ರೀತಿ ಮಾಡುತ್ತಿದ್ದೆವು. ಅದೇ ರೀತಿ ಆಗಲಿ.

ಅಧ್ಯಕ್ಷರು: No, ಹಾಗೆ ಆಗುವುದಿಲ್ಲ, ನೀವು ಸುಮ್ಮನಿರಿ. ನೀವು ಅದಕ್ಕೆ ಏನು ಉತ್ತರ ಹೇಳಬೇಕೋ ಹೇಳಿ. ಚರ್ಚೆ ಬೇಕೋ ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ, ಅವಕಾಶ ಕೊಡುತ್ತೇವೆ.

ಶ್ರೀಮತಿ ಶಾರದಾ ಪೂರ್ಯ ನಾಯ್ಕ: ಅವರು ಉತ್ತರ ಹೇಳಿದರು.

ಶ್ರೀ ಟಿ.ಬಿ. ಜಯಚಂದ್ರ: ಅವರು ಸಮಸ್ಯೆ ಏನು ಎಂದು ಹೇಳಿದ್ದಾರೆ. ಆ ಸಮಸ್ಯೆಯನ್ನು ಬಗೆಹರಿಸುವಂತಹ ಎಲ್ಲಾ ಪ್ರಯತ್ನವನ್ನು ಮಾಡುತ್ತೇವೆ. ಯಾವುದೇ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು: ಈಗ ಎಂ.ಟಿ. ಕೃಷ್ಣಪ್ಪ ಕೇಳಿ, ಅವರು ಇಲ್ಲ. ಸಿ.ಎನ್. ಬಾಲಕೃಷ್ಣ ಕೇಳಿ, ಇಲ್ಲ. ಪಿ. ರಾಜೀವ್ ರವರು ಕೇಳಿ.

(ಶ್ರೀ ಎಂ.ಟಿ. ಕೃಷ್ಣಪ್ಪ ಹಾಗೂ ಶ್ರೀ ಸಿ.ಎನ್. ಬಾಲಕೃಷ್ಣ ಗೈರುಹಾಜರು)

ಅಧ್ಯಕ್ಷರು: online ಅಂತೆ, ಇದನ್ನು ಯಾರು ಹೇಳಿದಿರಿ?

6. ವಿಷಯ: ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–1 ಮತ್ತು 2ರ ಹಂತದಲ್ಲಿ ಕುಡಚಿ ಮತಕ್ಷೇತ್ರದಲ್ಲಿ ಯಾವುದೇ ರಸ್ತೆ ಅಭಿವೃದ್ಧಿಪಡಿಸದಿರುವುದರಿಂದ ಈ ಸಾಲಿನಲ್ಲಿ 3ನೇ ಹಂತದಲ್ಲಿ